# 'ಸ್ವಚ್ಛ ಮೈಸೂರು, ಸ್ವಸ್ಥ ಜೀವನ' ಮೈಸೂರು ಅಗ್ರಹಾರ ಬಡಾವಣೆಯಲ್ಲಿ



ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಹಮ್ಮಿಕೊಂಡಿರುವ ೪೦ ವಾರಗಳ "**ಸ್ವಚ್ಛ ಮೈಸೂರು, ಸ್ವಸ್ಥ ಜೀವನ**" ಎಂಬ ಸ್ವಚ್ಛತಾ ಅಭಿಯಾನ ಮತ್ತು ಜನಜಾಗೃತಿ ಕಾರ್ಯಕ್ರಮದ ೩೬ನೇ ವಾರದ ಅಭಿಯಾನವು ನಗರದ ಅಗ್ರಹಾರದ ಚೆಲುವಾಂಬ ಅಗ್ರಹಾರ, ದೇವಾಂಬ ಅಗ್ರಹಾರ, ಕೆಂಪನಂಜಾಂಬ ಅಗ್ರಹಾರ, ಬನುಮಯ್ಯ ರಸ್ತೆ, ಕಾಶೀಪತಿ ಅಗ್ರಹಾರ, ಬಿ.ಬಿ ಲಾಯ, ತ್ಯಾಗರಾಜ ರಸ್ತೆ, ರಾಮಾನುಜ ರಸ್ತೆ, ಉತ್ತರಾದಿ ಮಠದ ರಸ್ತೆ ಮತ್ತು ಶಂಕರ ಮಠದ ರಸ್ತೆ ಸೇರಿದಂತೆ ವಿವಿಧ ಭಾಗಗಳಲ್ಲಿ ಯಶಸ್ವಿಯಾಗಿ ನಡೆಯಿತು.

೩೬ನೇ ವಾರದ ಅಭಿಯಾನದ ಉದ್ಘಾಟನೆಯನ್ನು ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಖಾತೆ ಸಚಿವರಾದ ಶ್ರೀ ರಮೇಶ್ ಜಿಗಜಿಣಗಿಯವರು ನೆರವೇರಿಸಿಕೊಟ್ಟರು. ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮಜ್ಞಾನಂದಜಿ, ಹೊಸಮಠದ ನಿರಂಜನ ಪ್ರಣವ ಸ್ವರೂಪಿ ಶ್ರೀಚಿದಾನಂದ ಮಹಾಸ್ವಾಮಿಗಳು, ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಡಿ.ಮಾದೇಗೌಡರು, ಮಹಾನಗರಪಾಲಿಕೆಯ ಮಹಾಪೌರರಾದ ಎಂ.ಜೆ.ರವಿಕುಮಾರ್, ಮಾಜಿ ವೈದ್ಯಕೀಯ ಶಿಕ್ಷಣ ಸಚಿವ ಶ್ರೀ ಎಸ್.ಎ.ರಾಮದಾಸ್, ಮಾಜಿ ಸಚಿವ ಶ್ರೀ ಎಂ.ಶಿವಣ್ಣ, ಪ್ರೊ.ಕೆ.ಎಸ್.ನಾಗಪತಿ ಮುಂತಾದ ಗಣ್ಯರು ಅಭಿಯಾನದ ಉದ್ಘಾಟನೆಯಲ್ಲಿ ಭಾಗವಹಿಸಿದ್ದರು.

ಸ್ವಯಂಸೇವಕರು ಮನೆಮನೆಗಳಿಗೆ ಭೇಟಿ ನೀಡಿ ಸಾರ್ವಜನಿಕರಿಗೆ ಅರಿವು ನೀಡುವ ಕಾರ್ಯದಲ್ಲಿ ಪಾಲ್ಗೊಂಡರು.

ಆಶ್ರಮದ ಸ್ವಯಂಸೇವಕರು, ವಿವಿಧ ಶೈಕ್ಷಣಿಕ ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಸ್ಥಳೀಯ ನಾಗರಿಕರನ್ನು ಒಳಗೊಂಡಂತೆ ಒಟ್ಟು ೪೦೦ ಜನ ಅಭಿಯಾನದಲ್ಲಿ ಪಾಲ್ಗೊಂಡರು.



# ತಿರುಪತಿ ಆಶ್ರಮದಲ್ಲಿ ನಿವೇದಿತಾ ಜಯಂತಿ

ತಿರುಪತಿ ರಾಮಕೃಷ್ಣ ಮಿಷನ್ ೨೦೧೭ರ ಅಕ್ಟೋಬರ್ ೨೮ರಂದು ಸೋದರಿ ನಿವೇದಿತಾ ಅವರ ೧೫೦ ನೇ ಜಯಂತಿ ಕಾರ್ಯಕ್ರಮವನ್ನು ಆಚರಿಸಿತು. ಈ ಪ್ರಯುಕ್ತ '**ಭಾರತೀಯ ನಿವೇದಿತಾ**' ಎಂಬ ವಿಚಾರ ಗೋಷ್ಠಿಯನ್ನು ಆಯೋಜಿಸಲಾಗಿತ್ತು.

ತಿರುಪತಿ ಭಾರತೀಯ ವಿದ್ಯಾಭವನದ ನಿರ್ದೇಶಕರಾದ ಶ್ರೀ ಎನ್. ಸತ್ಯನಾರಾಯಣ ರಾಜು ಅವರು ಈ ಸಂದರ್ಭದಲ್ಲಿ ಮಾತನಾಡುತ್ತ, "ಸ್ವಾತಂತ್ರ್ಯ ಸಂಗ್ರಾಮ, ಕಲೆ, ಸಂಸ್ಕೃತಿ, ಸ್ತ್ರೀಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ನಿವೇದಿತಾ ನೀಡಿದ ಕೊಡುಗೆ ಅಸಾಧಾರಣವಾದುದು. ಅವಳ ಹಾಗೆ ಭಾರತ ಹಾಗೂ ಭಾರತೀಯರನ್ನು ಪ್ರೀತಿಸಿದವರು ಬೇರೆ ಯಾರೂ ಇಲ್ಲ. ಆದ ಕಾರಣ ಇಂದಿನ ಯುವಪೀಳಿಗೆ ನಿವೇದಿತೆಯಿಂದ ದೇಶಭಕ್ತಿಯನ್ನು ಕಲಿಯಬೇಕಾಗಿದೆ" ಎಂದರು. ಆಂಧ್ರ ಬ್ಯಾಂಕಿನ ಸಹಾಯಕ ಜನರಲ್ ಮ್ಯಾನೇಜರ್ ಶ್ರೀ ಕೃಷ್ಣ ಮೋಹನ್ ಹಾಗೂ ಸುಪ್ರಸಿದ್ಧ ವೈದ್ಯೆ ಡಾ.ಲೀಲಾ ಮುಂತಾದವರು ಅತಿಥಿಗಳಾಗಿ ಭಾಗವಹಿಸಿದ್ದರು.









ತಿರುಪತಿ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯಕ್ಕೆ ಸೇರಿದ ೧೦ ಕಾಲೇಜುಗಳಿಂದ ಬಂದ ಸುಮಾರು ೨೫೦ ಮಂದಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅವರಲ್ಲಿ ೧೭೦ ಮಂದಿ ವಿದ್ಯಾರ್ಥಿಗಳು ಪ್ರಬಂಧಗಳನ್ನು ಬರೆದು ಸಲ್ಲಿಸಿದರು ಹಾಗೂ ೨೬ ಮಂದಿ ವಿದ್ಯಾರ್ಥಿಗಳು ವಿಚಾರಗೋಷ್ಠಿಯಲ್ಲಿ ಪಾಲ್ಗೊಂಡರು. ೮ ಮಂದಿ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಬಹುಮಾನ ವಿತರಣೆ ಮಾಡಲಾಯಿತು.

Managing Editor : Swami Atmajnananda Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020